1	2	3	4	5
27.	ಉತ್ತರ ಕನ್ನಡ	1248	1858	114.40
	ಒಟ್ಟು	**75958**	**56841**	**3029.06**

ರಾಜ್ಯದಲ್ಲಿ ಮೆಕ್ಕೆ ಜೋಳ ಖರೀದಿ ಬಗ್ಗೆ

4214 (4895) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ 2001-02, 2002-03ನೇ ಸಾಲಿನಲ್ಲಿ ಮೆಕ್ಕೆ ಜೋಳ ಖರೀದಿಸಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು;

ಆ) ರಾಜ್ಯದಲ್ಲಿ ಎಷ್ಟು ಕ್ವಿಂಟಾಲ್ ಮೆಕ್ಕೆ ಜೋಳ ಖರೀದಿಸಲಾಗಿದೆ? (ವಿವರ ನೀಡುವುದು)

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) 2001-2002ನೇ ಸಾಲಿನಲ್ಲಿ ಮೆಕ್ಕೆಜೋಳ ಸಂಗ್ರಹಿಸಲು ರೂ. 8.89 ಕೋಟಿಗಳನ್ನು ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ಆವರ್ತ ನಿಧಿಯಿಂದ ಪಡೆಯಲಾಗಿತ್ತು. 2002-03ನೇ ಸಾಲಿನಲ್ಲಿ ರೂ. 49.99 ಲಕ್ಷಗಳನ್ನು ರಿಸರ್ವಬ್ಯಾಂಕ್ ಆಫ್ ಇಂಡಿಯಾದಿಂದ ನಗದುಸಾಲ ಪಡೆದು ಮೆಕ್ಕೆಜೋಳವನ್ನು ಖರೀದಿಸಲಾಗಿತ್ತು.

ಆ) ರಾಜ್ಯದಲ್ಲಿ 2002-02 ಹಾಗೂ 2002-03ನೇ ಸಲಿನಲ್ಲಿ ಸಂಗ್ರಹಿಸಲಾದ ಮೆಕ್ಕೆಜೋಳದ ವಿವರ ಈ ಕೆಳಕಂಡಂತಿದೆ:-

2001-02ನೇ ಸಾಲಿನಲ್ಲಿ - 177829.74 ಕ್ವಿಂ

2002-03ನೇ ಸಾಲಿನಲ್ಲಿ - 9899.99 ಕ್ವಿಂ

ರಾಜ್ಯದಲ್ಲಿ ಬಿತ್ತನೆ ಬೀಜದ ಸಬ್ಸಿಡಿ ಬಗ್ಗೆ

4215 (4896) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ಯಾವ ಯಾವ ಬಿತ್ತನೆ ಬೀಜವನ್ನು ಸಬ್ಸಿಡಿ ನೀಡಲು ಆದೇಶಿಸಿದೆ;

ಆ) ಸಬ್ಸಿಡಿ ದರವೆಷ್ಟು;

ಇ) ಈ ಬಿತ್ತನೆ ಬೀಜವನ್ನು ಎಲ್ಲಾ ರೈತರುಗಳು ಸಬ್ಸಿಡಿ ದರದಲ್ಲಿ ಖರೀದಿಸಲು ಅರ್ಹರೇ;

ಈ) ದಿನಾಂಕ:30-6-2003 ರವರೆಗೂ ಎಷ್ಟೆಷ್ಟು ಬಿತ್ತನೆ ಬೀಜವನ್ನು ಸಬ್ಸಿಡಿ ದರದಲ್ಲಿ ನೀಡಲಾಗಿದೆ;

ಉ) ಬಗರ್ ಹುಕಂನಲ್ಲಿ ಜಮೀನು ಸಾಗುವಳಿ ಮಾಡುವವರಿಗೆ ಸಬ್ಸಿಡಿ ದರದಲ್ಲಿ ಬಿತ್ತನೆ ಬೀಜವನ್ನು ನೀಡಲಾಗುವುದೇ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಸರ್ಕಾರವು ಭತ್ತ, ರಾಗಿ,ಜೋಳ ಮುಸುಕಿನ ಜೋಳ ಸಜ್ಜಿ, ಗೋಧಿ, ಉದ್ದು, ಹೆಸರು ಅಲಸಂದೆ, ಶೇಂಗಾ ಸೂರ್ಯಕಾಂತಿ, ಸೋಯ ಅವರೆ ಮತ್ತು ಹತ್ತಿ ಬೆಳೆಗಳ ಬಿತ್ತನೆ ಬೀಜವನ್ನು ಮುಂಗಾರು ಹಂಗಾಮಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ ಶೇಕಡಾ 50ರ ರಿಯಾಯಿತಿ ದರದಲ್ಲಿ ನೀಡಲು ಆದೇಶಿಸಿದೆ.

ಆ) ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿಯಲ್ಲಿ ಶೇಕಡ 50ರ ರಿಯಾಯಿತಿ ಅಥವಾ ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ 1,000–00 ಗಳ ಮಿತಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬಿತ್ತನೆ ಬೀಜಗಳನ್ನು 13 ಬೆಳೆಗಳಲ್ಲಿ ನೀಡಲಾಗುತ್ತಿದೆ.

ಇ) ರಾಜ್ಯದ 24 ಜಿಲ್ಲೆಗಳಲ್ಲಿನ 134 ತಾಲ್ಲೂಕುಗಳಲ್ಲಿನ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಪಡೆಯಬಹುದಾಗಿದೆ.

ಈ) ಜೂನ್ ಅಂತ್ಯಕ್ಕೆ 32158 ಕ್ವಿಂಟಾಲ್ ಬಿತ್ತನೆ ಬೀಜ ವಿತರಿಸಲಾಗಿದೆ. ವಿವರ ಕೆಳಕಂಡಂತಿದೆ.

ಭತ್ತ	5295
ರಾಗಿ	129
ಜೋಳ	1301
ಮುಸುಕಿನಜೋಳ	7104
ಸಜ್ಜೆ	376
ತೊಗರಿ	1712
ಉದ್ದು	1456
ಹೆಸರು	1144
ಅಲಸಂದೆ	154
ಶೇಂಗಾ	1607
ಸೂರ್ಯಕಾಂತಿ	1547
ಸೋಯಅವರೆ	9275
ಹತ್ತಿ	1058
ಒಟ್ಟು	**32158**

ಉ) ಇಲ್ಲ. ಪ್ರಕೃತಿ ವಿಕೋಪ ಪರಿಹಾರ ನಿಧಿ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ಖಾತೆ ಇರುವ ರೈತರಿಗೆ ಮಾತ್ರ ಬಿತ್ತನೆ ಬೀಜ ನೀಡಲಾಗುವುದು.

ತುಂಗಾ ಎಡದಂಡೆ ಮತ್ತು ಬಲದಂಡೆ ನಾಲೆಗಳಿಗೆ ಖರ್ಚಾಗಿರುವ ಹಣದ ಬಗ್ಗೆ

4216 (4897) : ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುಂಗಾ ಎಡದಂಡೆ, ಬಲದಂಡೆ ನಾಲೆಗಳಿಗೆ 01.04.2000 ರಿಂದ 30.06.2003 ರ ನೆರವಿಗೆ ಖರ್ಚು ಮಾಡಿರುವ ಹಣವೆಷ್ಟು;

ಆ) ನಾಲೆಗಳಿಗೆ ಕಳೆದ ಮೂರು ವರ್ಷಗಳಿಂದ ಮಾಡಿರುವ ಮೊಬಲಗೆಷ್ಟು; (ವರ್ಷಾವಾರು ವಿವರ ನೀಡುವುದು)

ಇ) ಶಿವಮೊಗ್ಗ ಜಿಲ್ಲೆ ಗಾಜನೂರು ಆಣೆಕಟ್ಟು ಪಕ್ಕದಲ್ಲಿ ಕಟ್ಟಲಾಗುತ್ತಿರುವ ತುಂಗಾ ಮೇಲ್ದಂಡೆ ಯೋಜನೆಗೆ ಮಂಜೂರಾಗಿರುವ ಅಂದಾಜು ಎಷ್ಟು?

ಈ) ಇದುವರೆಗೂ ಮುಗಿದಿರುವ ಕಾಮಗಾರಿಗಳು ಯಾವುವು; ಇನ್ನೂ ಎಷ್ಟು ಬಾಕಿ ಇದೆ;

ಉ) ಈ ಯೋಜನೆಗೆ ಇದುವರೆವಿಗೂ ಖರ್ಚಾದ ಹಣ ಎಷ್ಟು ಹಾಗೂ ಇನ್ನು ಎಷ್ಟು ಹಣದ ಅವಶ್ಯಕತೆ ಇದೆ? (ವಿವರ ಒದಗಿಸುವುದು)